ಸುದ್ದಿಮನೆಗಳಲ್ಲದೆ, ಸಾಮಾನ್ಯ ಮನೆ ಮನೆಗಳಲ್ಲೂ ಈ ಗಾದೆಯ ಬಳಕೆಯನ್ನು ಕಾಣಬಹುದು.

"ಅಯ್ಯೋ ಸಾವಿತ್ರಮ್ಮಾ, ಈ ಹಾಳು ನೆಂಟರೋ, ಹೋದ್ಯಾ ಶನಿ ಅಂದ್ರೆ ಬಂದೆ ಗವಾಕ್ಷೀಲಿ ಅಂತ ಒಬ್ಬರನ್ನ ಸಾಗಹಾಕಿ ಬಂದರೆ ಇನ್ನೊಬ್ಬರು ವಕ್ರಿಸ್ತಾರೆ ರೀ!"

"ಔಷ್ದಿ ಇಟ್ಟಾಯ್ತು. ಬೋನ್ ಇಟ್ಟಾಯ್ತು. ಹೋದ್ಯಾ ಹೆಗ್ಗಣ್ವೇ ಅಂದ್ರೆ ಬಂದೆ ಬಿಲ್ದಿಂದ ಅನ್ನೋ ಹಾಗೆ ಇಲಿಗಳು ಮತ್ತೆ ಮತ್ತೆ ಬರ್ತಾನೇ ಇದಾವೇರಿ ಶಾಂತಮ್ಮ."

"ಅಲ್ರೀ ಮಹೇಶ್, ಮೊನ್ನೆಯಿನ್ನೂ ಕಟ್ಟಿದೀನಿ. ಆಗ್ಲೇ ಮತ್ತೆ ಬಂದು ಶನಿ ಹಾಗೆ ವಕ್ಕರಿಸ್ತು ನೋಡಿ ಇನ್ನೊಂದು ಸಾಲದ ಕಂತು."

ಸಕ್ಕರೆ, ಕಾಫಿಪುಡಿ, ಹಾಲು, ಮೊಸರು, ಬೇಳೆ, ಕಾಳು ಮುಂತಾದ ದಿನ ಬಳಕೆಯ ವಸ್ತುಗಳ ಕೈ ಸಾಲಕ್ಕೆ ಬರುವ ನೆರೆ'ಹೊರೆ'ಯವರ ಬಗ್ಗೆಯೂ ಈ ಗಾದೆಯನ್ನು ಬಳಸುತ್ತಿದ್ದುದನ್ನು ಚಿಕ್ಕವರಿದ್ದಾಗ ಕೇಳಿದ್ದೇವೆ. ಈಗ ಇಂತಹ ಕೈ ಸಾಲಕ್ಕೆ ಬರುವವರೇ ಇಲ್ಲ ಬಿಡಿ. ಆ ಕಾಲದಲ್ಲಿ, ಸಾಲದ ಗಿರಾಕಿಗಳು ಬಂದರೆ ಮುಖ ಸಿಂಡರಿಸುವ ಕಿರಾಣಿ ಅಂಗಡಿಯ ಶೆಟ್ಟರು ಹೊರಗೆ ಅನ್ನದಿದ್ದರೂ ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಿದ್ದರು "ಮಳ್ಳಿ ವಚ್ಚಾ ಪಿಸಾಚಿ!..." ಅದಕ್ಕೇ ಅಪ್ಪಂದಿರು ಮನೆಯಿಂದ ಹೊರಡುವಾಗಲೇ ಹೇಳಿ ಕಳಿಸಿರುತ್ತಿದ್ದರು 'ಇವತ್ತು ಮಾಮೂಲಿ ಶೆಟ್ಟರ ಅಂಗಡಿಗೆ ಹೋಗ್ಬೇಡ. ಇನ್ನೊಂದು ಅಂಗಡಿಗೆ ಹೋಗಿ ತಗೊಂಡ್ಬಾ' ಎಂದು!

ನಮ್ಮ ಕಾಲದಲ್ಲಿ ವರ್ಷಕ್ಕೊಂದು ಪರೀಕ್ಷೆ ಇರುತ್ತಿತ್ತು. ಟೆಸ್ಟ್‌ಗಳು ಎರಡೋ ಮೂರೋ ತಿಂಗಳಿಗೊಮ್ಮೆ ಇದ್ದರೆ ಇದ್ದಿತು, ಇಲ್ಲದಿದ್ದರೆ ಅದೂ ಇಲ್ಲ. ಇನ್ನು ಅಸೈನ್‌ಮೆಂಟು, ಪ್ರಾಜೆಕ್ಟು ಇತ್ಯಾದಿ ಯಾವ ತಾಪತ್ರಯವೂ ಇರಲಿಲ್ಲ. ಈಗ ನೋಡಿ, ಒಂದರ ಮೇಲೊಂದರಂತೆ ನೀಡುವ ಅಸೈನ್‌ಮೆಂಟುಗಳು, ಹಿಂದೆಯೇ ಬರುವ ಯೂನಿಟ್ ಟೆಸ್ಟುಗಳು, ಇವೆಲ್ಲದರ ನಡುವೆ ಕಾಲ ಕಾಲಕ್ಕೆ ಮಹಾರಾಜರಿಗೆ ನಜರು ಒಪ್ಪಿಸಿದಂತೆ ಒಪ್ಪಿಸಬೇಕಾದ ಪ್ರಾಜೆಕ್ಟುಗಳು! ಇನ್ನು ಪರೀಕ್ಷೆಗಳೋ ಸೆಮಿಸ್ಟರ್, ಟ್ರೈಮಿಸ್ಟರ್ ಎಂದು ಹುಣ್ಣಿಮೆ ಅಮಾವಾಸ್ಯೆ ಬಂದ ಹಾಗೆ ಕಣ್ಮುಚ್ಚಿ ತೆರೆಯುವುದರೊಳಗಾಗಿ ಬಂದುಬಿಡುತ್ತವೆ. ವಾರ್ಷಿಕ ಪರೀಕ್ಷೆಗೆ ಮೊದಲು ಪ್ರಿಪರೇಟರಿ ಪರೀಕ್ಷೆ ಎಂಬ ಹೆಚ್ಚಿನ ಭೂತ ಬೇರೆ. ಮಕ್ಕಳು, ಅವರ ಅಪ್ಪಅಮ್ಮಂದಿರು ಈ ಗಾದೆಯನ್ನು ಹೇಳದೆ ಇರಲು ಹೇಗೆ ಸಾಧ್ಯ?!

ಈ ಕೊರೊನಾ ಕಾಲದಲ್ಲಿ ಕರೆಂಟ್, ಹೋಗಿ ಬಂದು, ಮಾಡಿದ ಹಾಗೆ, ಯಾವಾಗ ಆಫ್‌ಲೈನ್ ಕ್ಲಾಸ್ ಇರತ್ತೋ, ಯಾವಾಗ ಆನ್‌ಲೈನ್ ಕ್ಲಾಸ್ ಇರತ್ತೋ ಹೇಳುವುದೇ ಕಷ್ಟ. ಮಕ್ಕಳು ಸ್ಕೂಲಿಗೆ ಹೋಗ್ಯೋ ಹಾಗಾಯ್ತು ಅಂದುಕೊಳ್ಳುವುದರಲ್ಲಿ ಮತ್ತೆ ಆನ್‌ಲೈನ್ ತರಗತಿಗಳ ಬಗ್ಗೆ ಸೂಚನೆ ಬಂದುಬಿಟ್ಟಿರುತ್ತೆ. ಈ ಕಾಲದ ವಿದ್ಯಾರ್ಥಿಗಳ ಪೋಷಕರ ಮಾಮೂಲಿ ಸ್ಲೋಗನ್ "ಹೋದ್ಯಾ ಅಂದರೆ!..."

ರಾಜಕೀಯದಲ್ಲಂತೂ ಈ ಗಾದೆ ರಾರಾಜಿಸುವುದನ್ನು ನೋಡಬಹುದು. ಆಯಾರಾಂ ಗಯಾರಾಂಗಳು ಆಗಾಗ್ಗೆ ಈ ಪಕ್ಷದಿಂದ ಆ ಪಕ್ಷಕ್ಕೆ, ಮತ್ತೆ ಆ ಪಕ್ಷದಿಂದ ಹಳೆಯ ಪಕ್ಷಕ್ಕೆ ಹಾರುವುದು ಇದ್ದಿದ್ದೇ ತಾನೇ? ಈ ವಿದ್ಯಮಾನ ಚುನಾವಣೆಗಳು ಬಂದಾಗ ಅತಿ ಹೆಚ್ಚಾಗಿ ನಡೆಯುವುದುಂಟು. ತನಗೆ ಟಿಕೆಟ್ ಸಿಗಲು ಅಡ್ಡಿಯಾಗಿದ್ದ ಪಕ್ಷದ ಹಿರಿಯನೊಬ್ಬ ಪಕ್ಷಾಂತರ ಮಾಡಿ ಬೇರೊಂದು ಪಕ್ಷಕ್ಕೆ ಹೋದಾಗ, ಸದ್ಯ ಆತ ತೊಲಗಿದ, ಇನ್ನು ನನಗೇ ಟಿಕೆಟ್ ಗ್ಯಾರಂಟಿ ಅಂದುಕೊಂಡು ನಿರಾಳನಾಗುತ್ತಾನೆ ಒಬ್ಬ ಯುವ ರಾಜಕಾರಣಿ. ಆದರೆ, ಏನೇನೋ ಹೇಳಲಾಗದ/ ಹೇಳಬಾರದ ಕಾರಣಗಳಿಂದ ಅದೇ ರಾಜಕಾರಣಿಯನ್ನು ಒಲಿಸಿಕೊಂಡು ಮತ್ತೆ ತವರುಪಕ್ಷಕ್ಕೆ ಬರಮಾಡಿಕೊಳ್ಳುತ್ತಾರೆ ವರಿಷ್ಠರು. ಆಗ ಯುವ ಆಕಾಂಕ್ಷಿಯ ಕನಸು ಭಗ್ನವಾಗುತ್ತದೆ. ಅವನು